ತಮಗೂ ಗೊತ್ತಿದೆ, ಮ್ಯಾನೇಜ್‌ಮೆಂಟ್ ಕೋಟಾದ ಮಾಹಿತಿ ನಮ್ಮ ಬಳಿ ಇರುವುದಿಲ್ಲ, ಅದಕ್ಕಾಗಿ ನಾವು ಎಲ್ಲ ಸಂಸ್ಥೆಗಳ ಮ್ಯಾನೇಜ್‌ಮೆಂಟ್‌ಗೆ ಪತ್ರ ಬರೆದಿದ್ದೇವೆ. ಅವರಿಂದ ಮಾಹಿತಿ ಬಂದಾಗ ನಿಮಗೆ ಕೊಡುತ್ತೇವೆ

ಶ್ರೀ ಸಿ.ಟಿ. ರವಿ: 6ನೇ ತಾರೀಖಿನೊಳಗೆ ನನಗೆ ಉತ್ತರ ಒದಗಿಸಿಕೊಡಿ

ಅಧ್ಯಕ್ಷರು: ಆಯಿತು

ವಿಷಯ: ತಾಲ್ಲೂಕುಗಳಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ತೆರೆಯುವುದು

613; ಶ್ರೀ ಮಂಜುನಾಥ್ ಹೆಚ್ ಪಿ.

ಅ) ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲು ಯಾವ ಯಾವ ತಾಲ್ಲೂಕಿನಿಂದ ಪ್ರಸ್ತಾವನೆಗಳು ಸರ್ಕಾರಕ್ಕೆ ಸ್ವೀಕೃತವಾಗಿರುತ್ತದೆ; (ವಿವರ ನೀಡುವುದು)

ಆ) ಈ ಪೈಕಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಇ) ಹಾಗಿದ್ದಲ್ಲಿ, ಸರ್ಕಾರದ ವತಿಯಿಂದ ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ವಿವರವು ಅನುಬಂಧದಲ್ಲಿ ಒದಗಿಸಿದೆ.

ಆ) ಬಂದಿದೆ.

ಇ) ವಿದ್ಯಾರ್ಥಿಗಳ ಸಂಖ್ಯೆ, ಜಮೀನಿನ ಲಭ್ಯತೆ, ಅನುದಾನದ ಲಭ್ಯತೆ ಹಾಗೂ ಅಗತ್ಯತೆ ಆಧಾರದ ಮೇಲೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಪ್ರಾರಂಭಿಸುವಲ್ಲಿ ಎ.ಐ.ಸಿ.ಟಿ. ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು

ಅನುಬಂಧ

ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲು ಸ್ವೀಕೃತವಾಗಿರುವ ಪ್ರಸ್ತಾವನೆಗಳು

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಸ್ಥಳ
1	ಉತ್ತರ ಕನ್ನಡ	ಹಳಿಯಾಳ	ದಾಂಡೇಲಿ
2	ಉತ್ತರ ಕನ್ನಡ	ಯಲ್ಲಾಪೂರ	ಯಲ್ಲಾಪೂರ
3	ಉತ್ತರ ಕನ್ನಡ ಜಿಲ್ಲೆ	ಅಂಕೋಲಾ	ಅಂಕೋಲಾ
4	ಬಾಗಲಕೋಟೆ	ಜಮಖಂಡಿ	ಜಮಖಂಡಿ
5	ಬೆಳಗಾವಿ	ಬೆಳಗಾವಿ	ಬೆಳಗಾವಿ
6	ಬೆಳಗಾವಿ	ಬೆಳಗಾವಿ	ಮುಚ್ಚಂಡಿ
7	ಬೆಳಗಾವಿ	ಹುಕ್ಕೇರಿ	ಪಶ್ಚಾಪೂರ
8	ಬೆಳಗಾವಿ	ಬೈಲಹೊಂಗಲ	ಕಿತ್ತೂರು
9	ಬೆಳಗಾವಿ	ಖಾನಾಪೂರ	ಖಾನಾಪೂರ
10	ಬೆಳಗಾವಿ	ಬೆಳಗಾವಿ	ಹೊಸವಂಟಮೂರಿ
11	ಬೆಳಗಾವಿ ಜಿಲ್ಲೆ	ಗೋಕಾಕ್	ಗೋಕಾಕ್
12	ಬೆಂಗಳೂರು ಗ್ರಾಜಿ	ಹೊಸಕೋಟೆ	ಹೊಸಕೋಟೆ
13	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು	ಬೆಂಗಳೂರು
14	ಬೆಂಗಳೂರು ದಕ್ಷಿಣ	ಆನೇಕಲ್	ಆನೇಕಲ್
15	ಬಳ್ಳಾರಿ	ಹಗರಿಬೊಮ್ಮನಹಳ್ಳಿ	ಹಗರಿಬೊಮ್ಮನಹಳ್ಳಿ
16	ಬಳ್ಳಾರಿ	ಸಂಡೂರು	ಸಂಡೂರು
17	ಬಳ್ಳಾರಿ	ಹೂವಿನ ಹಡಗಲಿ	ಹೂಳಲು
18	ಬೀದರ್	ಬೀದರ್	ಹುಲಸೂರ
19	ಬೀದರ್ ಜಿಲ್ಲೆ	ಭಾಲ್ಕಿ	ಭಾಲ್ಕಿ
20	ಬಿಜಾಪೂರ ಜಿಲ್ಲೆ	ಮುದ್ದೇಬಿಹಾಳ್	ಮುದ್ದೇಬಿಹಾಳ್

21	ಬಿಜಾಪೂರ ಜಿಲ್ಲೆ	ಇಂಡಿ	ಹಳಗುಣ
22	ಬಿಜಾಪೂರ ಜಿಲ್ಲೆ	ಇಂಡಿ	ಇಂಡಿ
23	ಶಿವಮೊಗ್ಗ	ಶಿವಮೊಗ್ಗ	ಶಿವಮೊಗ್ಗ
24	ಶಿವಮೊಗ್ಗ	ಶಿವಮೊಗ್ಗ	ಆಯನೂರು
25	ಮಂಡ್ಯ	ಮಳವಳ್ಳಿ	ಮಳವಳ್ಳಿ
26	ಮಂಡ್ಯ	ಮಂಡ್ಯ	ಮಂಡ್ಯ
27	ಮಂಡ್ಯ ಜಿಲ್ಲೆ	ಮದ್ದೂರು	ಮದ್ದೂರು
28	ಮೈಸೂರು	ಪಿರಿಯಾಪಟ್ಟಣ	ಪಿರಿಯಾಪಟ್ಟಣ
29	ಮೈಸೂರು	ನಂಜನಗೂಡು	ತಾಂಡವಪುರ
30	ಮೈಸೂರು	ಟಿ.ನರಸಿಪುರ	ಟಿ.ನರಸಿಪುರ
31	ಮೈಸೂರು ಜಿಲ್ಲೆ	ಕೆ.ಆರ್ ನಗರ	ಕೆ ಆರ್.ನಗರ
32	ಯಾದಗಿರ್	ಯಾದಗಿರ್	ಸೈದಾಪುರ
33	ಯಾದಗಿರ್ ಜಿಲ್ಲೆ	ಯಾದಗಿರ್	ಯಾದಗಿರ್
34	ಯಾದಗಿರ್ ಜಿಲ್ಲೆ	ಶಹಾಪೂರ	ಶಹಾಪೂರ
35	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ಶಿಡ್ಲಘಟ್ಟ
36	ಚಿಕ್ಕಬಳ್ಳಾಪುರ	ಗೌರಿಬಿದನೂರು	ಗೌರಿಬಿದನೂರು
37	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಮುದ್ದೇನಹಳ್ಳಿ
38	ಚಿಕ್ಕಮಗಳೂರು	ತರೀಕೆರೆ	ಶಿವನಿ
39	ಚಿಕ್ಕಮಗಳೂರು	ತರೀಕೆರೆ	ತರೀಕೆರೆ
40	ಚಿತ್ರದುರ್ಗ	ಹೊಳಲ್ಕೆರೆ	ಹೊಳಲ್ಕೆರೆ
41	ಚಿತ್ರದುರ್ಗ	ಚಳ್ಳಿಕೆರೆ	ಚಳ್ಳಿಕೆರೆ
42	ಹಾಸನ	ಚನ್ನರಾಯಪಟ್ಟಣ	ಶ್ರವಣಬೆಳಗೊಳ
43	ಹಾಸನ ಜಿಲ್ಲೆ	ಹಾಸನ	ಹಾಸನ
44	ಹಾಸನ	ಬೇಲೂರು	ಹಳೇಬೀಡು
45	ಹಾಸನ	ಹಾಸನ	ಅರಕಲಗೂಡು

46	ಹಾವೇರಿ	ಬ್ಯಾಡಗಿ	ಬ್ಯಾಡಗಿ
47	ಹಾವೇರಿ ಜಿಲ್ಲೆ	ಹಿರೆಕೆರೂರು	ಹಿರೆಕೆರೂರು
48	ಹಾವೇರಿ ಜಿಲ್ಲೆ	ಹಾವೇರಿ	ಹಾವೇರಿ
49	ಕೊಪ್ಪಳ	ಯಲಬುರ್ಗಾ	ಗುನ್ನಾಳ್
50	ಕೊಪ್ಪಳ	ಕೊಪ್ಪಳ	ತಳಕಲ್
51	ಕೋಲಾರ ಜಿಲ್ಲೆ	ಬಂಗಾರಪೇಟೆ	ಬಂಗಾರಪೇಟೆ
52	ಗುಲ್ಬರ್ಗಾ	ಚಿಂಚೋಳಿ	ಚಿಂಚೋಳಿ
53	ಗುಲ್ಬರ್ಗಾ ಜಿಲ್ಲೆ	ಜೇವರ್ಗಿ	ಜೇವರ್ಗಿ
54	ಗದಗ್ ಜಿಲ್ಲೆ	ಶಿರಹಟ್ಟಿ	ಶಿರಹಟ್ಟಿ
55	ಗದಗ್ ಜಿಲ್ಲೆ	ರೋಣ	ಹೊಳೆಆಲೂರು
56	ತುಮಕೂರು	ಪಾವಗಡ	ಪಾವಗಡ
57	ತುಮಕೂರು	ಗುಬ್ಬಿ	ಸಿ.ಎಸ್. ಪುರ
58	ತುಮಕೂರು	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ
59	ತುಮಕೂರು ಜಿಲ್ಲೆ	ಕುಣಿಗಲ್	ಯಡಿಯೂರು
60	ತುಮಕೂರು ಜಿಲ್ಲೆ	ಶಿರಾ	ಶಿರಾ
61	ಚಾಮರಾಜನಗರ	ಗುಂಡ್ಲುಪೇಟೆ	ಗುಂಡ್ಲುಪೇಟೆ
62	ಚಾಮರಾಜನಗರ ಜಿಲ್ಲೆ	ಕೊಳ್ಳೆಗಾಲ	ಕೊಳ್ಳೆಗಾಲ
63	ದಾವಣಗೆರೆ	ಹರಿಹರ	ಹರಿಹರ
64	ದಾವಣಗೆರೆ ಜಿಲ್ಲೆ	ಜಗಳೂರು	ಜಗಳೂರು
65	ದಕ್ಷಿಣ ಕನ್ನಡ	ಬಂಟವಾಳ	ಕಾಪು
66	ಧಾರವಾಡ	ಕಲಘಟಗಿ	ಕಲಘಟಗಿ
67	ಉಡುಪಿ	ಪಡುಬಿದ್ರೆ	ಪಡುಬಿದ್ರೆ
68	ರಾಮನಗರ	ಮಾಗಡಿ	ಕುದೂರು

ಶ್ರೀ ಹೆಚ್ ಪಿ ಮಂಜುನಾಥ್: ಉತ್ತರ ಕೊಟ್ಟಿದ್ದಾರೆ. ಹುಣಸೂರು ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎನ್ನುವ ಪ್ರಶ್ನೆಗೆ, ಬಂದಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಆದರೆ ಸ್ವೀಕೃತ ಪ್ರಸ್ತಾವನೆಗಳಲ್ಲಿ ಹುಣಸೂರು ತಾಲ್ಲೂಕನ್ನು ಕೈಬಿಡಲಾಗಿದೆ. ಏತಕ್ಕೋಸ್ಕರ ಕೈಬಿಟ್ಟಿದ್ದಾರೆ ಎನ್ನುವುದು ಒಂದು ಪ್ರಶ್ನೆ ವಿದ್ಯಾರ್ಥಿಗಳ ಸಂಖ್ಯೆ, ಜಮೀನಿನ ಲಭ್ಯತೆ ಇತ್ಯಾದಿಗಳನ್ನು ನೋಡಿಕೊಂಡು ಕೊಡಲಾಗುವುದು ಎಂದು ಹೇಳಿದ್ದಾರೆ. ಹುಣಸೂರಿನಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಅಲ್ಲಿ ಈಗಾಗಲೇ ಜಮೀನನ್ನು ಗುರುತಿಸಲಾಗಿದೆ ಸರ್ಕಾರ ಅನುದಾನವನ್ನು ಮಾತ್ರ ಬಿಡುಗಡೆ ಮಾಡಬೇಕು. ಆದ್ಯತೆಯಲ್ಲಿ ಹುಣಸೂರು ತಾಲ್ಲೂಕನ್ನು ಸೇರಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಬೇಕೆಂದು ಗೌರವಾನ್ವಿತ ಶಾಸಕರುಗಳ ಕಡೆಯಿಂದ ಬೇರೆ ಬೇರೆಯವರಿಂದ 68 ಪ್ರಸ್ತಾವನೆಗಳು ಸರ್ಕಾರದ ಮುಂದಿದೆ. ಹಾಗಾಗಿ ಎ. ಐ.ಸಿ.ಟಿ. ನಾರ್ಮ್ಸ್ ಪ್ರಕಾರ ನಾವು ಕ್ರಮ ತೆಗೆದುಕೊಂಡು ಪ್ರಾರಂಭ ಮಾಡಬೇಕಾಗುತ್ತದೆ ಹುಣಸೂರಿನಲ್ಲಿ ಪಾಲಿಟೆಕ್ನಿಕ್‌ಅನ್ನು ಪ್ರಾರಂಭ ಮಾಡಲು ಪ್ರಿಯಾರಿಟಿ ಮೇಲೆ ಸರ್ಕಾರ ಪರಿಗಣಿಸುತ್ತದೆ.

ವಿಷಯ: ಮಂಡ್ಯ ಜಿಲ್ಲೆಯಲ್ಲಿ ಎಂ.ಎಸ್.ಐ ಎಲ್ ಸನ್ನದುಗಳು

386; ಶ್ರೀ ನರೇಂದ್ರ ಸ್ವಾಮಿ ಪಿ.ಎಂ. (ಮಳವಳ್ಳಿ)

ಅ) ರಾಜ್ಯದಲ್ಲಿ ಈಗಾಗಲೇ ಪೂರ್ವಾನುಮತಿ ನೀಡಿರುವ ಮತ್ತು ಹಾಲಿ ಪ್ರಾರಂಭಗೊಂಡಿರುವ ಎಂ.ಎಸ್.ಐ.ಎಲ್ ಸನ್ನದುಗಳೆಷ್ಟು; ಇದನ್ನು ಪ್ರಾರಂಭಿಸಲು ಇರಬೇಕಾಗಿರುವ ನಿರ್ದಿಷ್ಟ ಮಾನದಂಡಗಳೇನು, (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಮಂಡ್ಯ ಜಿಲ್ಲೆಯಲ್ಲಿ ಎಲ್ಲೆಲ್ಲಿ ಎಂ.ಎಸ್.ಐ ಎಲ್. ಸನ್ನದುಗಳನ್ನು ಪ್ರಾರಂಭಿಸಲು ಪೂರ್ವಾನುಮತಿ ನೀಡಲಾಗಿದೆ. ಇನ್ನೂ ಎಷ್ಟು ಕಡೆ